1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**237/2017**

ಹೆಸರುಃ ಶಾಂತಕುಮಾರಿ .ಪಿ.ಎಸ್ ಚಾಸಾಃ 6

ಗಂಡಃ ಪ್ರಸನ್ನ .ವಿ.ಎಂ. ಪ್ರಾಸಾ: 4

ವಯಸ್ಸುಃ 43

ಉದ್ಯೋಗಃ ಗ್ರಾಮಲೆಕ್ಕಾಧಿಕಾರಿ , ಕೊಂಡದಹಳ್ಳಿ ವೃತ್ತ

ವಾಸ ಸ್ಥಳಃ ಚನ್ನಗಿರಿ

ಸಾಕ್ಷಿಗೆ ದಿನಾಂಕಃ 21-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

2008 ರಿಂದ ಇಲ್ಲಿಯವರೆಗೆ ಗ್ರಾಮಲೆಕ್ಕಾಧಿಕಾರಿಯಾಗಿ ಚನ್ನಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ . ದಿಃ 16-06-2014 ರಂದು ಸರ್ವೆ ನಂಃ 28/ಪಿ 1 ಮ್ಯೂಟೇಷನ್ ನಂಃ 72/2005-06 ಪೊರ್ಜರಿಯಾಗಿರುವ ಬಗ್ಗೆ ನನ್ನನ್ನು ತಹಶೀಲ್ದಾರ್ ರವರು ಕರೆಯಿಸಿ ಕೇಳಿರುತ್ತಾರೆ . ನಾನು ನೀಡಿರುವ ಮ್ಯೂಟೇಷನ್ ನಲ್ಲಿ ಇರುವ ಸಂಖ್ಯೆ ಸರಿಯಾಗಿದ್ದು ನಂತರ ಆರೋಪಿ ಸಲ್ಲಿಸಿರುವ ದಾಖಲೆಯಲ್ಲಿ ತಿದ್ದುಪಡಿಯಾಗಿರುತ್ತವೆ . ಸದರಿ ವಿಚಾರವಾಗಿ ನಾನು ತಾಲ್ಲೂಕು ಕಛೇರಿಯಿಂದ ಬಂದ ನೋಟಿಸಿಗೆ ಉತ್ತರ ನೀಡೀರುತ್ತೇನೆ . ಪೊಲೀಸರಿಗೂ ಹೇಳಿಕೆಯನ್ನು ನೀಡಿರುತ್ತೇನೆ . ನೋಟಿಸು ನೀಡಿದ ದಿನಾಂಕ ನನಗೆ ನೆನಪಿರುವುದಿಲ್ಲ . ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಸಾಕ್ಷಿಯು ಮಹಜರ್ ಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನಾನು ಚನ್ನಗಿರಿ ತಾಲ್ಲೂಕು ಕಛೇರಿಯ ಕ್ಯುಯೋಸ್ಕ್ ಭೂಮಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತೇನೆ ಎಂದರೆ ಸರಿ . ಸದರಿ ಕೆಲಸದಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಮ್ಯೂಟೇಷನ್ ಗಳನ್ನು ನೀಡಿರುತ್ತೇನೆ . ಚಾಸಾ 5 ರವರು ಹಾಲೋ ಗ್ರಾಂ ಮತ್ತು ಕರ್ನಾಟಕ ಸರ್ಕಾರ ಕಂದಾಯ ಇಲಾಖೆ ಅಂತ ಚಿಹ್ನೆ ಇರುವ , ವಾಟರ್ ಮಾರ್ಕ್ ಇರುವ ಶೀಟ್ ಗಳನ್ನು ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಪಡೆದುಕೊಂಡು ಬಂದು ಹಾಲೋ ಗ್ರಾಂನ್ನು ರಿಜಿಸ್ಟರ್ ನಲ್ಲಿ ಬರೆದುಕೊಂಡು ಹಾಲೋ ಗ್ರಾಂ ಮತ್ತು ವಾಟರ್ ಮಾರ್ಕ್ ಶೀಟ್ ಗಳನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ದಿಃ 16-06-2014 ರಂದು ನಾನು ನೀಡಿರುವ ಸರ್ವೆ ನಂಃ 28/ಪಿ 1 ರ ಮ್ಯೂಟೇಷನ್ ದಾಖಲೆಯಲ್ಲಿ ಟಿ . ಮಲ್ಲಿಕಾರ್ಜುನ ಬಿನ್ ಟಾಕ್ರಾ ನಾಯ್ಕ ಎಂಬ ಜಾಗದಲ್ಲಿ ಶಕುಂತಲ ಬಾಯಿ ಕೋಂ ಲೋಕೇಶನಾಯ್ಕ ಎಂದು ಬದಲಾಗಿ ಫೋರ್ಜರಿಯಾಗಿರುತ್ತದೆ ಎಂದರೆ ಸರಿ . ಸದರಿ ಆರೋಪಿಯು ಬ್ಯಾಂಕಿನಲ್ಲಿ ಸಾಲವನ್ನು ಪಡೆಯಲು ದಿಃ 18-06-2014 ರಂದು ಹೋದಾಗ ಬ್ಯಾಂಕ್ ಮ್ಯಾನೇಜರ್ ರವರಿಗೆ ಅನುಮಾನಗೊಂಡು ಮ್ಯೂಟೇಷನ್ ದಾಖಲೆಯನ್ನು ಪರಿಶೀಲಿಸಲು ತಾಲ್ಲೂಕು ಕಛೇರಿಗೆ ಕಳುಹಿಸಿದಾಗ ಸದರಿ ತಹಶೀಲ್ದಾರ್ ರವರು ತಿದ್ದುಪಡಿ ಕಂಡು ಬಂದಿರುತ್ತದೆ ಎಂದರೆ ಸರಿ . ದಿಃ 20-06-2014 ರಂದು ಸದರಿ ವಿಚಾರವಾಗಿ ತಹಶೀಲ್ದಾರ್ ರವರು ಆರೋಪಿಯ ವಿರುದ್ದ ಚನ್ನಗಿರಿ ಪೋಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ .

ದಿಃ 16-06-2014 ರಂದು ದೊಂದ್ರಾಘಟ್ಟ ಗ್ರಾಮದ ಸರ್ವೆ ನಂಃ 28/ಪಿ 1 ರ ದಾಖಲೆಗಳಲ್ಲಿ ನನ್ನ ಸಹಿ ಇರುವ ದಾಖಲೆಗಳನ್ನು ಮಾತ್ರ ನಾನು ನೀಡಿರುತ್ತೇನೆ ಎಂದರೆ ಸರಿ . ದಿಃ 01-10-2015 ರಂದು ತಹಶೀಲ್ದಾರ್ ರವರು ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ದಾಖಲೆಯನ್ನು ನಾನು ದಿಃ 08-10-2015 ರಂದು ಸ್ವೀಕರಿಸಿರುತ್ತೇನೆ

ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಗುರುತಿಸಿದ್ದ ಮೇರೆಗೆ ನಿ ಪಿ 4 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4 ಎ ಎಂದು ಗುರುತಿಸಲಾಯಿತು .

ನಂತರ ಬಿಳಿ ಹಾಳೆಯಲ್ಲಿ ನೋಟಿಸು ತಲುಪಿದ ಎರಡು ದಿನಗಳ ನಂತರ ನಾನು ತಹಶೀಲ್ದಾರ್ ರವರಿಗೆ ಉತ್ತರವನ್ನು ನೀಡಿರುತ್ತೇನೆ . ಸದರಿ ದಾಖಲೆಯನ್ನು ನಿ ಪಿ 5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 5 ಎ ಎಂದು ಗುರುತಿಸಲಾಯಿತು .

ದಿಃ 16-06-2014 ರಂದು ನಾನು ನೀಡಿರುವ ಮ್ಯೂಟೇಶನ್ ಪ್ರತಿಯ ದಾಖಲೆಯಾಗಿ ಅದರ ಪಟ್ಟಿಯನ್ನು ವರದಿಯಲ್ಲಿ ಸಲ್ಲಿಸಿರುತ್ತೇನೆ . ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಬಹಳ ವರ್ಷಗಳಾದ್ದರಿಂದ ನನಗೆ ಹೇಳಲಾಗಲಿಲ್ಲ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –**

ನಿ ಪಿ 5 ರಲ್ಲಿ ಇರುವ ದಾಖಲೆಯನ್ನು ನಾನು ನನ್ನ ತಪ್ಪನ್ನು ಮುಚ್ಚಿ ಇಡಲು ತಹಶೀಲ್ದಾರ್ ರವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . ನನ್ನಿಂದಲೇ ಪಹಣಿ ಮತ್ತು ಮ್ಯೂಟೇಶನ್ ಪ್ರತಿಗಳಲ್ಲಿ ತಿದ್ದುಪಡಿಯಾಗಿರುತ್ತವೆ ಎಂದರೆ ಸರಿಯಲ್ಲ . ನನ್ನ ತಪ್ಪಿನಿಂದಲೇ ಪಹಣಿ ಮತ್ತು ಮ್ಯೂಟೇಶನ್ ಪ್ರತಿಗಳಲ್ಲಿ ತಿದ್ದುಪಡಿಯಾಗಿದ್ದರೂ ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಯು ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದು , ಅವರ ತೇಜೋವಧೆ ಮಾಡಲು ನಾನು ಹಾಗೂ ನನ್ನ ಇಲಾಖೆಯವರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**